ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಧಾರವಾಡ-580001
Deputy Commissioner Office,
Dharwad-580001
e-mail: deo.dharwad@gmail.com

ಕರ್ನಾಟಕ ಸರ್ಕಾರ
Government of karnataka

ದೂರವಾಣಿ: 0836-2233840, 2233880,
(ಫ್ಯಾಕ್ಸ್) 0836-2747102,
website:www.dharwad.nic.in

ಕ್ರ.ಸಂ.ಸಿಬ್ಬಂದಿ-3/ಗ್ರಾಲೆನೇ/ವಹಿ-10/2019-20

ದಿನಾಂಕ 30-11-2019

## ಪ್ರ ಕ ಟ ಣೆ

ವಿಷಯ:- ಧಾರವಾಡ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿಯಿಂದ ಮೆರಿಟ್ ಆಧಾರದ ಮೇಲೆ ಭರ್ತಿ ಮಾಡಲು ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗುವ ಕುರಿತು

ಉಲ್ಲೇಖ:- ಈ ಕಾರ್ಯಾಲಯದ ಸಮಸಂಖ್ಯೆ ಅಧಿಸೂಚನೆ ದಿ: 31-07-2019

ಧಾರವಾಡ ಜಿಲ್ಲಾ ಕಂದಾಯ ಘಟಕದಲ್ಲಿ ವಿವಿಧ ಕಾರಣಗಳಿಂದ ಖಾಲಿ ಇರುವ 22 ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿಯಿಂದ ಮೆರಿಟ್ ಆಧಾರದ ಮೇಲೆ ಭರ್ತಿ ಮಾಡಲು ದಿನಾಂಕ 31-07-2019 ರಂದು ಅಧಿಸೂಚನೆ ಹೊರಡಿಸಿ ವೆಬ್‌ಸೈಟ್ http://dharwad-va.kar.nic.in ರಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಒಟ್ಟು ಸ್ವೀಕೃತವಾದ ಅರ್ಹ ಅರ್ಜಿಗಳಲ್ಲಿ 1:10 ಅನುಪಾತದಲ್ಲಿ ನೇರ ಮೀಸಲಾತಿ ಮತ್ತು ಸಮತಳ ಮೀಸಲಾತಿ ಆಧಾರದ ಮೇಲೆ ತಾತ್ಕಾಲಿಕ ಪಟ್ಟಿಯನ್ನು ತಯಾರಿಸಿ http://dharwad.nic.in ರಲ್ಲಿ ಪ್ರಕಟಿಸಲಾಗಿದೆ.

ಸದರಿ ತಾತ್ಕಾಲಿಕ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆಯನ್ನು ದಿನಾಂಕ 23-12-2019 ಮತ್ತು 24-12-2019 ರಂದು ಬೆಳಿಗ್ಗೆ 10-00 ಗಂಟೆಯಿಂದ ಸಂಜೆ 5-00 ಗಂಟೆಯವರೆಗೆ ಜಿಲ್ಲಾಧಿಕಾರಿಗಳು ಧಾರವಾಡ ಇವರ ಕಾರ್ಯಾಲಯದ ಸಭಾ ಭವನ(ಹೊಸ ಕಟ್ಟಡ)ದಲ್ಲಿ ಜರುಗಿಸಲಾಗುವುದು. ಅಭ್ಯರ್ಥಿಗಳು ಈ ಕೆಳಗೆ ಕಾಣಿಸಿದ ಮೂಲ ದಾಖಲೆಗಳನ್ನು ಈ ಕೆಳಕಂಡ ದಿನಾಂಕಗಳಂದು ಖುದ್ದಾಗಿ ಪರಿಶೀಲನೆ ಹಾಜರಾಗಲು ಸೂಚಿಸಿದೆ. ಅಭ್ಯರ್ಥಿಗಳು ತಮಗೆ ಸೂಚಿಸಿದ ದಿನಾಂಕದಂದು ಹಾಜರಾಗದೇ ಬೇರೆ ದಿನಾಂಕದಂದು ಹಾಜರಾದಲ್ಲಿ ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

***ಹಾಜರ ಪಡಿಸಬೇಕಾದ ಮೂಲ ದಾಖಲೆಗಳು:-***

1. ಪಿಯುಸಿ/ಸಿಬಿಎಸ್‌ಸಿ/ಐಸಿಎಸ್‌ಸಿ ಮೂಲ ಅಂಕ ಪಟ್ಟಿ
2. ಜನ್ಮ ದಾಖಲೆ ಮೂಲ ಪ್ರಮಾಣ ಪತ್ರ ಅಥವಾ ಎಸ್.ಎಸ್.ಎಲ್.ಸಿ ಮೂಲ ಅಂಕ ಪಟ್ಟಿ
3. ಅರ್ಜಿಯಲ್ಲಿ ಮೀಸಲಾತಿ ಬಗ್ಗೆ ಕ್ಲೇಮ್ ಮಾಡಿ ಸಲ್ಲಿಸಿದ ಈ ಕೆಳಗೆ ಕಾಣಿಸಿದ ಪ್ರಮಾಣ ಪತ್ರಗಳು 1)ಜಾತಿ ಪ್ರಮಾಣ ಪತ್ರ 2)ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ 3)ಕನ್ನಡ ಮಾಧ್ಯಮ ವ್ಯಾಸಂಗ ಮಾಡಿದ ಅಭ್ಯರ್ಥಿ ಪ್ರಮಾಣ ಪತ್ರ 4)ಮಾಜಿ ಸೈನಿಕ 5)ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ
4. ಅಂಗವಿಕಲ ಅಭ್ಯರ್ಥಿಗಳ ವೈದ್ಯಕೀಯ ಪ್ರಮಾಣ ಪತ್ರ
5. ಮಾಜಿ ಸೈನಿಕರಿದ್ದಲ್ಲಿ ಸೈನಿಕ ಸೇವೆಯಿಂದ ಬಿಡುಗಡೆಯಾದ/ಮುಕ್ತಿ ಹೊಂದಿದ ಬಗ್ಗೆ ಪ್ರಮಾಣ ಪತ್ರ
6. ಅರ್ಜಿ ಸಲ್ಲಿಸಿದ ಪ್ರತಿ

7. ಅರ್ಜಿ ಶುಲ್ಕ ಸಂದಾಯ ಮಾಡಿದ ಬಗ್ಗೆ ರಶೀದಿ

ಅಭ್ಯರ್ಥಿಗಳು ಪರಿಶೀಲನೆಗೊಳಪಡುವ ಎಲ್ಲಾ ಮೂಲ ದಾಖಲೆಗಳ ದೃಢೀಕೃತ ನಕಲುಗಳ ಎರಡು ಸೆಟ್‌ಗಳನ್ನು ಪರಿಶೀಲನೆ ಸಮಯದಲ್ಲಿ ಹಾಜರಪಡಿಸುವುದು.

| ಅ.ನಂ. | ಮೂಲ ದಾಖಲೆಗಳ ಪರಿಶೀಲನೆ ದಿನಾಂಕ | ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗಬೇಕಾದ ಅಭ್ಯರ್ಥಿಗಳ ವಿವರ | |
|---|---|---|---|
| 01 | 23-12-2019 | ಪರಿಶಿಷ್ಟ ಜಾತಿ | 1 ರಿಂದ 30 |
| | | ಪರಿಶಿಷ್ಟ ಪಂಗಡ | 1 ರಿಂದ 10 |
| | | ಪ್ರವರ್ಗ-1 | 1 ರಿಂದ 10 |
| | | ಪ್ರವರ್ಗ-2ಎ | 1 ರಿಂದ 40 |
| | | ಪ್ರವರ್ಗ-2ಬಿ | 1 ರಿಂದ 10 |
| | | ಪ್ರವರ್ಗ-3ಬಿ | 1 ರಿಂದ 10 |
| 02 | 24-12-2019 | ಸಾಮಾನ್ಯ | 1 ರಿಂದ 110 |

ಅಧ್ಯಕ್ಷರು,
ಗ್ರಾಮಲೆಕ್ಕಾಧಿಕಾರಿಗಳ ನೇರ ನೇಮಕಾತಿ
ಆಯ್ಕೆ ಪ್ರಾಧಿಕಾರ ಹಾಗೂ
ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ

ಪ್ರತಿಗಳು:

1. ಉಪವಿಭಾಗಾಧಿಕಾರಿಗಳು ಧಾರವಾಡ ಇವರಿಗೆ
2. ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಧಾರವಾಡ

   2/- ಮೂಲ ದಾಖಲೆ ಪರಿಶೀಲನಾ ಸಭೆಗೆ ದಿನಾಂಕ 23-12-2019 ಮತ್ತು 24-12-2019 ರಂದು ಈ ಕಾರ್ಯಾಲಯಕ್ಕೆ ಹಾಜರಾಗಿ, ಅಭ್ಯರ್ಥಿಗಳು ಹಾಜಪಡಿಸುವ ಜಾತಿ ಪ್ರಮಾಣ ಪತ್ರಗಳನ್ನು ಪರಿಶೀಲಿಸಲು ಕೋರಿದೆ.
3. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಧಾರವಾಡ ಇವರಿಗೆ-

   2/-ಸದರಿ ಪ್ರಕಟಣೆಯನ್ನು ಸಾರ್ವಜನಿಕ ಸುದ್ದಿ ಅಂತಾ ಸ್ಥಳೀಯ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲು ಕೋರಲಾಗಿದೆ.
4. ಜಿಲ್ಲೆಯ ಎಲ್ಲಾ ತಹಶೀಲ್ದಾರಗಳಿಗೆ

   2/- ಸದರ ಪ್ರಕಟಣೆಯನ್ನು ತಮ್ಮ ಕಾರ್ಯಾಲಯದ ನೋಟೀಸ ಬೋರ್ಡಿಗೆ ಪ್ರಕಟಿಸಿ, ಪ್ರಕಟಿಸಿದ ಬಗ್ಗೆ ವರದಿಯನ್ನು ಈ ಕಾರ್ಯಾಲಯಕ್ಕೆ ಸಲ್ಲಿಸುವುದು.